6. ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯ ಪ್ರಸ್ತಾಪ:

ಶ್ರೀ ವೀರಣ್ಣ ಚರಂತಿಮಠ (ಬಾಗಲಕೋಟೆ):– ಸನ್ಮಾನ್ಯ ಸಭಾಧ್ಯಕ್ಷರೆ, 2013 ಫೆಬ್ರವರಿ 4 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರುಗಳಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆಯನ್ನು ಕೋರುತ್ತೇನೆ.

ಅಧ್ಯಕ್ಷರು:– ಶ್ರೀ ಬಿ.ಎನ್. ವಿಜಯ್‌ಕುಮಾರ್ ರವರು.

ಶ್ರೀ ಬಿ.ಎನ್. ವಿಜಯ ಕುಮಾರ್ (ಜಯನಗರ):– ಮಾನ್ಯ ಅಧ್ಯಕ್ಷರೆ, ಶ್ರೀಯುತರಾದ ವೀರಣ್ಣ ಚರಂತಿಮಠ್ ರವರು ಸೂಚಿಸಿರುವ ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

ಅಧ್ಯಕ್ಷರು:– ಈಗ ಸದನವನ್ನು ಮಧ್ಯಾಹ್ನ 02.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 02 ಗಂಟೆ 30 ನಿಮಿಷಕ್ಕೆ ಸೇರುವಂತೆ ಮಧ್ಯಾಹ್ನ 01 ಗಂಟೆ 23 ನಿಮಿಷಕ್ಕೆ ಮುಂದೂಡಲಾಯಿತು)

*****

(ಸದನವು ಮಧ್ಯಾಹ್ನ 03.00 ಘಂಟೆಗೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ಸಭಾಧ್ಯಕ್ಷರಾದ ಶೀ ಕೆ.ಜೆ. ಬೋಪಯ್ಯನವರು ಉಪಸ್ಥಿತರಿದ್ದರು)